**OS No.136/2008**
**PW.2**

<u>ದಿನಾಂಕಃ **10.11.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>

ವಾದಿ ಭಾಗ ಕೋರಿ ಸದರಿ ಕೇಸನ್ನು ಸಲ್ಲಿಸಿರುತ್ತಾರೆ. ವಾದಿಯ ತಂದೆಯ ಹೆಸರು ಚಿಕ್ಕರಂಗಪ್ಪ. ಚಿಕ್ಕರಂಗಪ್ಪನ ತಂದೆಯ ಹೆಸರು ಮುನಿತಿಮ್ಮಯ್ಯ. ತಿಮ್ಮಯ್ಯ ಮತ್ತು ಚಿಕ್ಕರಂಗಪ್ಪ ಸಹೋದರರು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ ವಿಭಾಗ ಮಾಡಿಕೊಂಡಿರುವುದಿಲ್ಲ. ವಿಭಾಗ ಮಾಡಿಕೊಂಡು ವಾದಿ ತನ್ನ ಸ್ವತ್ತನ್ನು ಹನುಮಂತರಾಯಪ್ಪ ಎಂಬುವವರಿಗೆ ದಿಃ 19.03.1997 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ವಿಭಾಗದ ಬಗ್ಗೆ ವಾದಿಯ ಬಳಿ ವಿಚಾರಿಸಿರುವುದಿಲ್ಲ. ಪ್ರತಿವಾದಿಯನ್ನು ಅವರ ಚಿಕ್ಕಪ್ಪ ಚಿಕ್ಕದಾಸಪ್ಪ ಸಾಕಿಕೊಂಡಿದ್ದರು ಎದರೆ ಸರಿ. ದಾವಾ ಐಟಂ ನಂ.1 ಚಿಕ್ಕದಾಸಪ್ಪನಿಗೆ ಸೇರಿದ್ದು ಎಂದರೆ ಸರಿ. ಸದರಿ ಚಿಕ್ಕದಾಸಪ್ಪ ಪ್ರತಿವಾದಿ-1 ರವರಿಗೆ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಆಸ್ತಿ ಪ್ರತಿವಾದಿ-1 ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. 10.05.2006 ರಲ್ಲಿ ಪ್ರತಿವಾದಿ-1 ರವರು ಪ್ರತಿವಾದಿ-2 ರವರಿಗೆ ಕ್ರಯಪತ್ರಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ.1 ರ ಕಂದಾಯ ದಾಖಲೆಗಳು ಯಾರ ಹೆಸರಿನಲ್ಲಿ ಬರುತ್ತಿದೆ ಎಂದು ಗೊತ್ತಿಲ್ಲ. ದಾವಾ ಜಮೀನಿನ ಅಕ್ಕಪಕ್ಕ ನನ್ನ ಜಮೀನು ಇರುವುದಿಲ್ಲ.

ದಾವಾಸ್ವತ್ತಿಗೆ ಯಾರು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ-2 ರವರು ದಾವಾಸ್ವತ್ತಿನಲ್ಲಿ ಇದ್ದಾರೆ ಎಂದರೆ ಗೊತ್ತಿಲ್ಲ. ದಾವಾಸ್ವತ್ತು ಐಟಂ ನಂ.1 ವಾದಿಯ ಪಿತ್ರಾರ್ಜಿತ ಸ್ವತ್ತು ಅಲ್ಲ ಪ್ರತಿವಾದಿ-1 ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ತಿಮ್ಮಯ್ಯ ಮತ್ತು ಚಿಕ್ಕದಾಸಪ್ಪರವರನ್ನು ನಾನು ನೋಡಿರುವುದಿಲ್ಲ. ಚಿಕ್ಕದಾಸಪ್ಪನ ಮಕ್ಕಳು ಊರಿನಲ್ಲಿ ವಾಸವಿರುವುದಿಲ್ಲ. ಚಿಕ್ಕದಾಸಪ್ಪನ ತಮ್ಮ ತಿಮ್ಮಯ್ಯನಿಗೆ ದಾವಾ ಐಟಂ ನಂ.1 ಭಾಗಕ್ಕೆ ಹೋಗಿರುತ್ತದೆ ಎಂದರೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ.

ಮರುವಿಚಾರಣೆಃ ಇಲ್ಲ.

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
ದೊಡ್ಡಬಳ್ಳಾಪುರ .